ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಗ್ರಾಮೀಣ ಕೈಗಾರಿಕೆಗಳು
ಜಿಲ್ಲಾ ಪಂಚಾಯತ್, ಮಂಡ್ಯ

ಉಪ ನಿರ್ದೇಶಕರು(ಗ್ರಾ.ಕೈ)ರವರ ಕಛೇರಿ,
ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ, ಸುಭಾಷ್‌ನಗರ
ಮಂಡ್ಯ. ಕಛೇರಿ/ Off: 08232-221566

---

**ಸಂಖ್ಯೆ:ಕೈವಾಇ/ಉನಿ/ಗ್ರಾಕೈ/ಜಿಪಂಮಂ/ಅನ್‌ಲೈನ್ ಅರ್ಜಿ/2024-25** **ದಿನಾಂಕ: 23-07-2024**

ರವರಿಗೆ

ಸಹಾಯಕ ನಿರ್ದೇಶಕರು,
ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
ಮಂಡ್ಯ.

ಮಾನ್ಯರೇ,

ವಿಷಯ:-**2024-25** ನೇ ಸಾಲಿನಲ್ಲಿ ಉಚಿತವಾಗಿ ಹೊಲಿಗೆಯಂತ್ರ ಹಾಗೂ ಪವರ್‌ಟೂಲ್ಸ್ ವಿತರಿಸುವ ಸಂಬಂಧ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಪ್ರತಿಕೆಯಲ್ಲಿ ಪ್ರಕಟಿಸುವ ಬಗ್ಗೆ.

*******

ವಿಷಯಕ್ಕೆ ಸಂಬಂಧಿಸಿದಂತೆ, **2024-25** ನೇ ಸಾಲಿನಲ್ಲಿ ಜಿಲ್ಲೆಯ ಗ್ರಾಮಾಂತರ ಪ್ರದೇಶದ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ/ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಿಕೊಂಡು ಹೋಗಲು ಇಲಾಖಾ ಸೌಲಭ್ಯವನ್ನು ಪಡೆಯಲು ಇಚ್ಚಿಸಿದಲ್ಲಿ, ಅನುಬಂಧದಲ್ಲಿರುವ ಮಾಹಿತಿಯಂತೆ ಸಂಬಂದಪಟ್ಟ ಎಲ್ಲಾ ದಾಖಲಾತಿಗಳನ್ನು https://mandya.nic.in **website**ನಲ್ಲಿ **ದಿನಾಂಕ: 23-07-2024 ರಿಂದ 22-08-2024 ರೊಳಗೆ** ಅಪ್‌ಲೋಡ್ ಮಾಡಿ ಅನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಗಾಗಿ ಸಂಬಂದಪಟ್ಟ ತಾಲ್ಲೂಕು ಕೈಗಾರಿಕಾ ವಿಸ್ತರಣಾಧಿಕಾರಿಗಳು/ ಉಪ ನಿರ್ದೇಶಕರ ಕಛೇರಿ, ಗ್ರಾಮೀಣ ಕೈಗಾರಿಕೆಗಳು (ಖಾದಿ ಮತ್ತು ಗ್ರಾಮೋದ್ಯೋಗ), ಮಂಡ್ಯ ಇಲ್ಲಿ ಸಂಪರ್ಕಿಸುವುದು.

ಸದರಿ ಪ್ರಕಟಣೆಯನ್ನು ತಮ್ಮ ಇಲಾಖೆಯ ಮುಖಾಂತರ ರಾಜ್ಯ ಮಟ್ಟದ ಹಾಗೂ ಸ್ಥಳೀಯ ಕನ್ನಡ ದಿನ ಪತ್ರಿಕೆಯಲ್ಲಿ ಉಚಿತವಾಗಿ ತಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ,

ಉಪ ನಿರ್ದೇಶಕರು (ಗ್ರಾ.ಕೈ)
ಕೈಗಾರಿಕಾ ವಿಭಾಗ
ಜಿಲ್ಲಾ ಪಂಚಾಯತ್, ಮಂಡ್ಯ.

ಪ್ರತಿಯನ್ನು:-

1) The District information Officer, District information Center, Mandya District,Mandya
2) ಕಛೇರಿ ಪ್ರತಿ.

## ಅನುಬಂಧ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ
ಗ್ರಾಮೀಣ ಕೈಗಾರಿಕೆಗಳು
ಜಿಲ್ಲಾ ಪಂಚಾಯತ್, ಮಂಡ್ಯ

*ಉಪ ನಿರ್ದೇಶಕರವರ ಕಛೇರಿ,*
*ಗ್ರಾಮೀಣ ಕೈಗಾರಿಕೆಗಳು (ಖಾಗ್ರಾ),*
ಜಿಲ್ಲಾ ಕೈಗಾರಿಕಾ ಕೇಂದ್ರ ಕಟ್ಟಡ, ಸುಭಾಷ್‌ನಗರ
ಮಂಡ್ಯ. ಕಛೇರಿ/ Off: 08232-221566

**ದಿನಾಂಕ: 23-07-2024**

| ಕ್ರ.ಸಂ | ಯೋಜನೆ ವಿವರ | ಅರ್ಜಿಯೊಂದಿಗೆ ಸಲ್ಲಿಸಲು ಬೇಕಾದ ದಾಖಲಾತಿಗಳು |
|---|---|---|
| 01 | ವೃತ್ತಿಪರ ಗ್ರಾಮೀಣ ಕುಶಲಕರ್ಮಿಗಳಿಗೆ ಉಚಿತವಾಗಿ ಸುಧಾರಿತ ಉಪಕರಣ ಸರಬರಾಜು ಯೋಜನೆಯಡಿ **ವಿದ್ಯುತ್‌ಚಾಲಿತ ಹೊಲಿಗೆಯಂತ್ರ ಮತ್ತು ಮರಗೆಲಸ, ಗಾರೆಕೆಲಸ, ಕ್ಷೌರಿಕ ಹಾಗೂ ಧೋಬಿ ಉಪಕರಣಗಳನ್ನು ಪಡೆಯುವವರು** | 1) ಪಾಸ್ಪೋರ್ಟ್ ಗಾತ್ರದ ಭಾವಚಿತ್ರ **(in JPG format)**<br>2) ಜಾತಿ ಪ್ರಮಾಣ ಪತ್ರ (in PDF file) (SC, ST, Minority)<br>3) **ಹೊಲಿಗೆ ತರಬೇತಿ** ಪಡೆದ ಪ್ರಮಾಣ ಪತ್ರ **(in PDF file)**<br>4) ರೇಷನ್ ಕಾರ್ಡ್/ ವೋಟರ್ ಐ.ಡಿ. ಹೊಂದಿದ್ದಲ್ಲಿ ಪ್ರತಿ ಲಗತ್ತಿಸುವುದು.<br>5) **ವಿದ್ಯುತ್‌ಚಾಲಿತ ಹೊಲಿಗೆಯಂತ್ರ** ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ಧೃಡೀಕರಣ ಪತ್ರ.<br>6) **ಮರಗೆಲಸ, ಗಾರೆಕೆಲಸ, ಕ್ಷೌರಿಕ ಹಾಗೂ ಧೋಬಿ** ಕಸುಬಿನ ಕುಶಲಕರ್ಮಿಯಾಗಿದ್ದಲ್ಲಿ ಆಯಾ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಂದ ಧೃಡೀಕರಣ ಪತ್ರ/ ಕಾರ್ಮಿಕ ಇಲಾಖೆಯಿಂದ ವಿತರಿಸಿದ ಕುಶಲಕರ್ಮಿ ಗುರುತಿನ ಚೀಟಿ ಪ್ರತಿ. **(in PDF file)**<br>7) **ಆನ್‌ಲೈನ್ ಅರ್ಜಿಯೊಂದಿಗೆ ದಾಖಲಾತಿಗಳನ್ನು ಉಪ ನಿರ್ದೇಶಕರು, ಗ್ರಾಮೀಣ ಕೈಗಾರಿಕೆಗಳು (ಖಾಗ್ರಾ), ಸುಭಾಷ್‌ನಗರ, ಮಂಡ್ಯ ಹಾಗೂ ಅಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.** |

ಉಪ ನಿರ್ದೇಶಕರು (ಗ್ರಾ. ಕೈ.)
ಕೈಗಾರಿಕಾ ವಿಭಾಗ
ಜಿಲ್ಲಾ ಪಂಚಾಯತ್, ಮಂಡ್ಯ

# <u>ಪತ್ರಿಕಾ ಪ್ರಕಟಣೆ</u>

**2024–25** ನೇ ಸಾಲಿನ ಜಿಲ್ಲಾ ಪಂಚಾಯತ್ ಅನುದಾನದಡಿ ವೃತ್ತಿಪರ ನಿರತ ಗ್ರಾಮೀಣ ಪ್ರದೇಶದ ಕುಶಲಕರ್ಮಿಗಳಿಗೆ, ಸುಧಾರಿತ ಉಪಕರಣ ಸರಬರಾಜು/ ವಿಶೇಷ ಘಟಕ/ ಗಿರಿಜನ ಉಪ ಯೋಜನೆಯಡಿ **ವಿದ್ಯುತ್‌ಚಾಲಿತ ಹೊಲಿಗೆಯಂತ್ರ, ಪವರ್‌ಟೂಲ್ಸ್‌ಗಳಾದ ಮರಗೆಲಸ, ಗಾರೆಕೆಲಸ, ಧೋಬಿ ಹಾಗೂ ಕ್ಷೌರಿಕ** ಉಪಕರಣಗಳನ್ನು (ಉಚಿತವಾಗಿ) ವಿತರಿಸಲು ಅನುಬಂಧದಲ್ಲಿರುವ ದಾಖಲಾತಿಗಳೊಂದಿಗೆ ಆನ್‌ಲೈನ್ ಮೂಲಕ ಅರ್ಜಿಯನ್ನು ಅಹ್ವಾನಿಸಿದ್ದು, https://mandya.nic.in websiteನಲ್ಲಿ ವಿಳಾಸದ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸಲು ದಿನಾಂಕ: **23–07–2024 ರಿಂದ 22–08–2024** ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಗ್ರಾಮೀಣ ಕೈಗಾರಿಕೆಗಳು (ಖಾಗ್ರಾ), ಸುಭಾಷ್‌ನಗರ, ಮಂಡ್ಯ ರವರ ಕಛೇರಿ ದೂರವಾಣಿ: **08232–221566** ಅಥವಾ ಖುದ್ದಾಗಿ ಕಛೇರಿ ಸಂಪರ್ಕಿಸಬಹುದು.

| |
|---|
| <u>**ಸೂಚನೆ:**</u> **ಆನ್‌ಲೈನ್ ಅರ್ಜಿಯೊಂದಿಗೆ ಅನುಬಂಧದಲ್ಲಿ ನಮೂದಿಸಿರುವ ದಾಖಲಾತಿಗಳನ್ನು ಉಪ ನಿರ್ದೇಶಕರು, ಗ್ರಾಮೀಣ ಕೈಗಾರಿಕೆಗಳು (ಖಾಗ್ರಾ), ಸುಭಾಷ್‌ನಗರ, ಮಂಡ್ಯ ಹಾಗೂ ಅಯಾ ತಾಲ್ಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.** |

ಉಪ ನಿರ್ದೇಶಕರು (ಗ್ರಾ. ಕೈ)
ಕೈಗಾರಿಕಾ ವಿಭಾಗ
ಜಿಲ್ಲಾ ಪಂಚಾಯತ್, ಮಂಡ್ಯ